ಕರ್ನಾಟಕ ಸರ್ಕಾರ

[ಸಾರ್ವಜನಿಕ ಶಿಕ್ಷಣ ಇಲಾಖೆ]

ಕರ್ನಾಟಕ ಪಠ್ಯಪುಸ್ತಕ ಸಂಘ [ರಿ]

ಸಂಖ್ಯೆ:ಎ6.ಕ.ಪ.ಪು.ಸಂ.ಸಾವೆಚ-02/2020-21 ದಿನಾಂಕ:15.06.2020

# ಜ್ಞಾಪನ

ವಿಷಯ:-2020-21 ನೇ ಸಾಲಿನ ಪಠ್ಯಪುಸ್ತಕಗಳ ಸಾಗಾಣಿಕಾ ವೆಚ್ಚ ಬಿಡುಗಡೆ ಮಾಡುವ ಬಗ್ಗೆ ಹಾಗೂ ಉಪಯೋಗಿತ ಪ್ರಮಾಣ ಪತ್ರ ಸಲ್ಲಿಸುವ ಕುರಿತು.

ಉಲ್ಲೇಖ:-1] ಟೆಂಡರ್ ಅಧಿಸೂಚನೆ ಸಂಖ್ಯೆ:ಎ7.ಕ.ಪ.ಪು.ಸಂ./309951/ ಎಂ.ಡಿ.ಎಕ್ಸ್‌ಟಿಬಿ/2/ಟಿ.ಬಿ.ಟಿ/2019-20.

-****-

2020-21 ಸಾಲಿಗೆ 1 ರಿಂದ 10 ನೇ ತರಗತಿವರೆಗೆ ಪಠ್ಯಪುಸ್ತಕಗಳನ್ನು ಬ್ಲಾಕ್ ಹಂತಕ್ಕೆ ಮುದ್ರಿಸಿ ಸರಬರಾಜು ಮಾಡಲಾಗಿದೆ. ಸರಬರಾಜಾಗಿರುವ ಪಠ್ಯಪುಸ್ತಕಗಳನ್ನು ಸೂಕ್ತ ರೀತಿಯಲ್ಲಿ ಸ್ವೀಕರಿಸಿ ದಾಸ್ತಾನು ಮಾಡುವ ಪ್ರಕ್ರಿಯೆಯನ್ನು ಬ್ಲಾಕ್ ಹಂತಗಳಲ್ಲಿ ಮಾಡಿಕೊಂಡಿರುತ್ತೀರಿ, ಈ ಪಠ್ಯಪುಸ್ತಕಗಳನ್ನು ಬ್ಲಾಕ್‌ನಿಂದ ಅಂತಿಮವಾಗಿ ಶಾಲೆಗಳಿಗೆ ತಲುಪಿಸಬೇಕಾಗುತ್ತದೆ. ಅತ್ಯಂತ ವ್ಯವಸ್ಥಿತವಾಗಿ ಈ ಪ್ರಕ್ರಿಯೆಯನ್ನು ಹಮ್ಮಿಕೊಂಡು ಯಾವುದೇ ದೂರುಗಳಿಗೆ ಆಸ್ಪದವಾಗದಿರುವಂತೆ ನಿಖರವಾಗಿ ಎಸ್.ಎ.ಟಿ.ಎಸ್. ಅಂಕಿ ಅಂಶಗಳಂತೆ ಶಾಲೆಗಳಿಗೆ ಸಾಗಾಣಿಕೆ ಮಾಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಈಗಾಗಲೇ ಬ್ಲಾಕ್ ಹಂತಕ್ಕೆ ಮುದ್ರಿಸಿ ಸರಬರಾಜಾಗಿರುವ ಪಠ್ಯಪುಸ್ತಕಗಳು, ಅಭ್ಯಾಸಪುಸ್ತಕಗಳು ಹಾಗೂ ದಿನಚರಿಗಳನ್ನು ಸೂಕ್ತ ರೀತಿಯಲ್ಲಿ ಸ್ವೀಕರಿಸಿ ಬ್ಲಾಕ್‌ನಿಂದ ಶಾಲೆಗಳಿಗೆ ವಿತರಿಸಬೇಕಾಗಿರುತ್ತದೆ.

ಪಠ್ಯಪುಸ್ತಕಗಳು, ಅಭ್ಯಾಸಪುಸ್ತಕಗಳು ಮತ್ತು ದಿನಚರಿಗಳನ್ನು ತಾಲ್ಲೂಕು ಹಂತದಿಂದ ಶಾಲೆಗಳಿಗೆ ಸಾಗಾಣಿಕೆ ಮಾಡಲು ಇಡೀ ಪ್ರಕ್ರಿಯೆಗೆ ತಗಲುವ ಹೆಚ್ಚುವರಿ ಸಾಗಾಣಿಕೆ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ರೂ.1.50/-ರಂತೆ ಲೆಕ್ಕಹಾಕಿ ನೆಫ್ಟ್ ಮುಖಾಂತರ ನೇರವಾಗಿ ಕ್ಷೇತ್ರಶಿಕ್ಷಣಾಧಿಕಾರಿಗಳ ಬ್ಯಾಂಕ್ ಖಾತೆಗೆ ಈಗಾಗಲೇ ಜಮಾ ಮಾಡಲಾಗಿದೆ. ಹಾಗೂ ಸಾಗಾಣಿಕಾ ವೆಚ್ಚ ಬಿಡುಗಡೆ ವಿವರದ ಅನುಬಂಧವನ್ನು ಈ ಜ್ಞಾಪನದೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ಸಾಗಾಣಿಕೆ ಮೊತ್ತವನ್ನು ನಿಯಮಾನುಸಾರ ಖರ್ಚು ಭರಿಸಿರುವ ಬಗ್ಗೆ ದಿನಾಂಕ:31.03.2021 ರೊಳಗಾಗಿ ಉಪಯೋಗಿತ ಪ್ರಮಾಣ ಪತ್ರವನ್ನು ತಪ್ಪದೇ ಈ ಕಛೇರಿಗೆ ಕಳುಹಿಸುವುದು.

ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಬಿಡುಗಡೆ ಮಾಡಲಾದ ಸಾಗಾಣಿಕೆ ಅನುದಾನದಲ್ಲಿ ಉಳಿಕೆ ಆದಲ್ಲಿ ಉಪಯೋಗಿತ ಪ್ರಮಾಣ ಪತ್ರದ ಜೊತೆಗೆ, ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಆಗಿರುವ ಖರ್ಚುಗಳನ್ನು ನಮೂದಿಸಿ ಅಂತಿಮ ಉಳಿಕೆ ಮೊತ್ತಕ್ಕೆ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)ಬೆಂಗಳೂರು ಇವರ ಹೆಸರಿನಲ್ಲಿ ಬ್ಯಾಂಕ್ ಹುಂಡಿ ಅಥವಾ ನೆಫ್ಟ್ ಮುಖಾಂತರ ಜಮೆ ಮಾಡತಕ್ಕದ್ದು, ಸಾಗಾಣಿಕೆ ವೆಚ್ಚದ ಬಗ್ಗೆ ಜಾರಿಯಲ್ಲಿರುವ ಪಾರದರ್ಶಕ ಕಾಯ್ದೆನಿಯಮಗಳನ್ನು [ಕೆ.ಟಿ.ಪಿ.ಪಿ] ಹಾಗೂ ತೆರಿಗೆ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಈ ಬಗ್ಗೆ ದಾಖಲೆಗಳನ್ನು ನಿಮ್ಮ ಕಛೇರಿಯ ಹಂತದಲ್ಲಿ ನಿರ್ವಹಿಸಿ ಲೆಕ್ಕಪತ್ರ ತಪಾಸಣೆ ವೇಳೆ ತಪಾಸಣಾಧಿಕಾರಿಗಳಿಗೆ ತಪ್ಪದೇ ತಪಾಸಣೆಗೆ ಸಲ್ಲಿಸತಕ್ಕದ್ದು. ಈ ಜ್ಞಾಪನದೊಂದಿಗೆ ಉಪಯೋಗಿತ ಪ್ರಮಾಣ ಪತ್ರದ ಮಾದರಿ ಪ್ರತಿಯನ್ನು ಕಳುಹಿಸಿದೆ ಅದರಂತೆ ಕ್ಷೇತ್ರಶಿಕ್ಷಣಾಧಿಕಾರಿಗಳು ದೃಢೀಕರಣದೊಂದಿಗೆ ಸಲ್ಲಿಸುವುದು.

(ಎಂ.ಪಿ.ಮಾದೇಗೌಡ)

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಪಠ್ಯಪುಸ್ತಕ ಸಂಘ [ರಿ]

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗಾಗಿ,
2. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಲೆಕ್ಕಾಧಿಕಾರಿಗಳು, ಕರ್ನಾಟಕ ಪಠ್ಯಪುಸ್ತಕ ಸಂಘ [ರಿ] ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ.

Scanned with CamScanner